
## 13.07.2023, Thursday: Protection of the Jalagaradibba inscription of 740 AD (the second oldest inscription in kannada) and Heritage Walk at Honnudike village, Guluru Hobli, Tumakuru Taluk

Shramadana activity of NSS units was done by preserving the Jalagaradibba inscription of 740 AD. The protection of the inscription which experts say is precious and the second oldest inscription in kannada is a matter of great joy for us and a matter of pride for our college NSS units. Broaken parts of the Shivlinga, the broken idols related to the Jalgaradibba site were kept in a safe place. Dr. D. N. Yogeeshwarappa, retired professor explained the students the meaning of the Old Kannada sentences (Halegannada) in the Jalgaradibba inscription. The locals were then told about the importance of the inscription and requested to preserve it. It was an unforgettable day of life for everyone who participated in such a work.









Later, a Jatha was held on the streets of the village to create awareness about the preservation of monuments and inscriptions.



# Press reports about the preservation of the Jalagaradibba inscription

# ಶಾಸನ ಸಂರಕ್ಷಿಸಿದ ಎನ್‌ಎಸ್‌ಎಸ್ ವಿದ್ಯಾರ್ಥಿನಿಯರು

## ಜಿಲ್ಲೆಯ ಮೊಟ್ಟಮೊದಲ ಶಿಲಾಶಾಸನವನ್ನು ಸ್ವಚ್ಛಗೊಳಿಸಿ, ಮತ್ತದೇ ಸ್ಥಳದಲ್ಲಿ ಪುನರ್ ಸ್ಥಾಪನೆ

• **ಕನ್ನಡಪ್ರಭ ವಾರ್ತೆ** ತುಮಕೂರು

ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಪದವಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿನಿಯರು ತುಮಕೂರು ಬಳಿಯ ಹೊನ್ನುಡಿಕೆಯಿಂದ ಜಲಗಾರ ದಿಬ್ಬದವರೆಗೆ ಹೆರಿಟೇಜ್ ವಾಕ್ ಮೂಲಕ ಮೆರವಣಿಗೆಯಲ್ಲಿ ಸಾಗಿ ಮಣ್ಣಿನಲ್ಲಿ ಹೂತುಹೋಗಿದ್ದ ತುಮಕೂರು ಜಿಲ್ಲೆಯ ಮೊಟ್ಟಮೊದಲ ಶಿಲಾಶಾಸನವನ್ನು ಮೇಲಕ್ಕೆತ್ತಿ, ಸ್ವಚ್ಛಗೊಳಿಸಿ ಅದೇ ಸ್ಥಳದಲ್ಲಿ ಪುನರ್ ಸ್ಥಾಪಿಸಿದರು.

ಈ ಸಂದರ್ಭದಲ್ಲಿ ಮಾರ್ಗದರ್ಶನ ನೀಡಿದ ಇತಿಹಾಸ ಸಂಶೋಧಕ ಡಾ. ಡಿ.ಎನ್. ಯೋಗೀಶ್ವರಪ್ಪನವರು ಈ ಶಾಸನವು ಕ್ರಿ.ಶ. 749ರ ಕಾಲಕ್ಕೆ ಸೇರಿದ್ದು, ತಲಕಾಡು ಗಂಗರ ದೊರೆ ಶ್ರೀಪುರುಷ ತನ್ನ ಚಿಕ್ಕಪ್ಪ ಶಿವಮಾರ ಎರೆಯಪ್ಪ ಹೊನ್ನುಡಿಕೆಯನ್ನು ಆಳ್ವಿಕೆ ಮಾಡುತ್ತಿದ್ದನು. ದೊರೆ ಶ್ರೀಪುರುಷ ಮಹಾರಾಜ ಸುಗ್ಗಿಯ ಕಾಲದಲ್ಲಿ ಹೊನ್ನುಡಿಕೆಯಲ್ಲಿ ಸಂಗ್ರಹವಾಗುತ್ತಿದ್ದ ಬಂಗಾರದ ರೂಪದ ಸುಂಕವನ್ನು ಅಲ್ಲಿನ ದೇವಿ ಭಟಾರರಿಗೆ (ಹೊನ್ನಾದೇವಿ) ಜಮಾ ಮಾಡಬೇಕೆಂದು ಆದೇಶಿಸಿದ್ದಾನೆ ಎಂದು ತಿಳಿಸಿದರು.

ಈ ಶಾಸನವನ್ನು ಗ್ರಾನೈಟ್ ಶಿಲೆಯಲ್ಲಿ 4 ಅಡಿ ಅಗಲ 2 ಅಡಿ ಎತ್ತರದಲ್ಲಿ ಎಂಟು ಸಾಲಿನಲ್ಲಿ ಬರೆಯಲಾಗಿದೆ. ಇದೇ ಜಾಗದಲ್ಲಿ ಇನ್ನೊಂದು ಶಾಸನವೂ ಇತ್ತು. ಅದೂ ಕೂಡಾ ತಲಕಾಡು ಗಂಗರ ಕಾಲಕ್ಕೆ ಸೇರಿತ್ತು. ಆ ಶಾಸನವೂ ಎಂಟು ಸಾಲುಗಳನ್ನೊಳಗೊಂಡಿದ್ದು ಹೊನ್ನುಡಿಕೆಯ ಕಮರುಗ ಎಂಬ ವೀರ ಹೋರಾಟದಲ್ಲಿ ಸತ್ತುಹೋಗಿದ್ದುದರಿಂದ ಗಂಗದೊರೆ ಶ್ರೀವಿಕ್ರಮನು ಆತನ ಕುಟುಂಬ ನಿರ್ವಹಣೆಗೆ ಭೂದಾನ ನೀಡಿ ಆ ಶಾಸನವನ್ನು ಬರೆಯಿಸಿದ್ದಾನೆ. ಆದರೆ ಆ ಶಾಸನವನ್ನು ಮುಳುಕುಂಟೆಗೆ ಸಾಗಿಸಿ ಅಲ್ಲಿನ ಆಶ್ರಮದ ಪಕ್ಕದಲ್ಲಿ ನಿಲ್ಲಿಸಿದ್ದಾರೆ ಎಂಬ ಮಾಹಿತಿ ನೀಡಿದರು.

ಹೊನ್ನುಡಿಕೆ ಬಳಿಯ ಜಲಗಾರ ದಿಬ್ಬದ ಬಳಿ ಎಂಟನೇ ಶತಮಾನದಲ್ಲಿ ಚಿಕ್ಕ ತೊರೆಯೊಂದು ಹರಿಯುತ್ತಿದ್ದು ಅದರ ಬಳಿ ವಿಶ್ವಕರ್ಮಿಗಳು ಆ ನೀರಿನಲ್ಲಿ ಬರುತ್ತಿದ್ದ ಮಣ್ಣನ್ನು ಪರಿಶೋಧಿಸಿ ಬಂಗಾರವನ್ನು ಸಂಗ್ರಹಿಸುತ್ತಿದ್ದರೆಂದು ಹೇಳಲಾಗುತ್ತದೆ. ಆದರೆ ಇಂದು ಆ ತೊರೆ ಪೂರ್ಣವಾಗಿ ನಾಶವಾಗಿದ್ದು, ಆ ಪ್ರದೇಶದಲ್ಲಿ ಜಮೀನುಗಳಾಗಿವೆ. ಆ ಜಾಗದಲ್ಲಿ ಇಂದಿಗೂ ಇರುವ ದೇವಾಲಯದ ಅವಶೇಷಗಳಾದ ದೇವರ ಪಾಣಿಪೀಠ, ಇಟ್ಟಿಗೆ ಚೂರು ಮುಂತಾದ ಪ್ರಾಚೀನ ಪಳೆಯುಳಿಕೆಗಳನ್ನು ವಿದ್ಯಾರ್ಥಿನಿಯರು ಸಂಗ್ರಹಿಸಿ ಅವುಗಳನ್ನು ಅಲ್ಲಿಯೇ ಒಂದೆಡೆ ಸಂಗ್ರಹಿಸಿ ಇಟ್ಟಿದ್ದಾರೆ.

ಹೊನ್ನುಡಿಕೆಯ ಅತ್ಯಂತ ಪ್ರಾಚೀನ ದೇವಾಲಯವಾದ ಚೊಕ್ಕಪೆರುಮಾಳ ದೇವಾಲಯದ ಸುತ್ತ ಬೆಳೆದಿದ್ದ ಮುಳ್ಳಿನ ಗಿಡಗಂಟೆಗಳನ್ನು ಕಿತ್ತುಹಾಕಿ, ಆ ದೇಗುಲದ ಆವರಣವನ್ನು ಸ್ವಚ್ಛಗೊಳಿಸಿ ಅಲ್ಲಿನ ಜನರಲ್ಲಿ ಸ್ಮಾರಕಗಳ ಸಂರಕ್ಷಣೆಯ ಅರಿವಿನ ಜಾಗೃತಿಯನ್ನು ಮೂಡಿಸಿದರು.

ರಾಷ್ಟ್ರೀಯ ಸೇವಾ ಯೋಜನೆಯ ಅಧಿಕಾರಿಗಳಾದ ಡಾ. ನಳಿನ, ಹರ್ಷಶ್ರೀ, ಪ್ರಭುಸ್ವಾಮಿ, ಸ್ಮಾರಕಗಳ ಸಂರಕ್ಷಣೆಗೆ ಮಾರ್ಗದರ್ಶನ ನೀಡಿದ ಡಾ. ಡಿ.ಎನ್. ಯೋಗೀಶ್ವರಪ್ಪ, ಹೊನ್ನುಡಿಕೆಯ ಉದಯ್, ಜಲಗಾರ ದಿಬ್ಬ ಸ್ಥಳವಿರುವ ಜಮೀನಿನ ಮಾಲಿಕ ಜಗದೀಶ್ ಮೊದಲಾದವರಿದ್ದರು.



ವಿದ್ಯಾರ್ಥಿನಿಯರು ಮಣ್ಣಿನಿಂದ ಹೊರತೆಗೆದು, ಸ್ವಚ್ಛಗೊಳಿಸಿ, ಪುನರ್‌ಸ್ಥಾಪಿಸಿದ ಶಿಲಾಶಾಸನ.

---

ಕ್ರಿ.ಶ.749ರ ಕಾಲದ ಹೊನ್ನುಡಿಕೆ ಇತಿಹಾಸಕ್ಕೆ ಕಾಯಕಲ್ಪ | ಸ್ವಚ್ಛಗೊಳಿಸಿ ಅದೇ ಸ್ಥಳದಲ್ಲಿ ಮತ್ತೆ ಸ್ಥಾಪಿಸಿದ ವಿದ್ಯಾರ್ಥಿನಿಯರು

# ಮಣ್ಣಿನಲ್ಲಿ ಹೂತುಹೋಗಿದ್ದ ಜಿಲ್ಲೆಯ ಮೊದಲ ಶಾಸನ ಪತ್ತೆ

■ ವಿಜಯವಾಣಿ ಸುದ್ದಿಜಾಲ ತುಮಕೂರು

ಜಿಲ್ಲೆಯ ಮೊಟ್ಟಮೊದಲ ಶಿಲಾಶಾಸನ ಎಂಬ ಹೆಗ್ಗಳಿಕೆ ಹೊಂದಿ ಮಣ್ಣಿನಲ್ಲಿ ಹೂತುಹೋಗಿದ್ದ ಶಾಸನವನ್ನು ಎನ್ನೆಸ್ಸೆಸ್ ವಿದ್ಯಾರ್ಥಿನಿಯರು ಮೇಲಕ್ಕೆತ್ತಿ, ಸ್ವಚ್ಛಗೊಳಿಸಿ ಅದೇ ಸ್ಥಳದಲ್ಲಿ ಮತ್ತೆ ಸ್ಥಾಪಿಸಿದ್ದಾರೆ.

ನಗರದ ಶ್ರೀ ಸಿದ್ಧಗಂಗಾ ಮಹಿಳಾ ಪದವಿ ಕಾಲೇಜು ವಿದ್ಯಾರ್ಥಿನಿಯರು ಇತಿಹಾಸ ಸಂಶೋಧಕ ಡಾ.ಡಿ.ಎನ್. ಯೋಗೀಶ್ವರಪ್ಪ ಅವರೊಂದಿಗೆ ಇತ್ತೀಚೆಗೆ ಹೊನ್ನುಡಿಕೆಯಿಂದ ಜಲಗಾರ ದಿಬ್ಬದವರೆಗೆ ಹೆರಿಟೇಜ್ ವಾಕ್ ಮೂಲಕ ಮೆರವಣಿಗೆಯಲ್ಲಿ ಸಾಗಿ ಜಿಲ್ಲೆಯ ಮೊದಲ ಶಾಸನಕ್ಕೆ ಕಾಯಕಲ್ಪ ನೀಡಿದ್ದಾರೆ. ಈ ಸಂರಕ್ಷಿತ ಶಾಸನ ಕ್ರಿ.ಶ.749ರ ಕಾಲಕ್ಕೆ ಸೇರಿದ್ದಾಗಿದ್ದು, ತಲಕಾಡು ಗಂಗರ ದೊರೆ ಶ್ರೀಪುರುಷ ತನ್ನ ಚಿಕ್ಕಪ್ಪ ಶಿವಮಾರ ಎರೆಯಪ್ಪ ಹೊನ್ನುಡಿಕೆಯನ್ನು ಆಳ್ವಿಕೆ ಮಾಡುತ್ತಿದ್ದನು. ದೊರೆ ಶ್ರೀಪುರುಷ ಮಹಾರಾಜ ಸುಗ್ಗಿಯ ಕಾಲದಲ್ಲಿ ಹೊನ್ನುಡಿಕೆಯಲ್ಲಿ ಸಂಗ್ರಹವಾಗುತ್ತಿದ್ದ ಬಂಗಾರದ ರೂಪದ ಸುಂಕವನ್ನು ಅಲ್ಲಿನ ದೇವಿ ಭಟಾರರಿಗೆ (ಹೊನ್ನಾದೇವಿ) ಜಮಾ ಮಾಡಬೇಕೆಂದು ಆದೇಶಿಸಿರುವುದು ಉಲ್ಲೇಖವಾಗಿದೆ.

ಜಿಲ್ಲೆಯ ಮೊದಲ ಶಾಸನ ಎಂಬ ಹೆಗ್ಗಳಿಕೆಯ ಗ್ರಾನೈಟ್ ಶಿಲೆಯ ಶಾಸನ 4 ಅಡಿ ಅಗಲ 2 ಅಡಿ ಎತ್ತರದಲ್ಲಿ ಎಂಟು ಸಾಲಿನಲ್ಲಿ ಬರೆಯಲಾಗಿದೆ. ಇದೇ ಜಾಗದಲ್ಲಿ ತಲಕಾಡು ಗಂಗರ ಕಾಲಕ್ಕೆ ಸೇರಿದ ಇನ್ನೊಂದು ಶಾಸನ ಕೂಡ ಪತ್ತೆಯಾಗಿದೆ. ಪತ್ತೆಯಾಗಿರುವ ಎರಡನೇ ಶಾಸನವೂ ಎಂಟು ಸಾಲುಗಳನ್ನೊಳಗೊಂಡಿದ್ದು ಹೊನ್ನುಡಿಕೆಯ ಕಮರುಗ ಎಂಬ ವೀರ ಹೋರಾಟದಲ್ಲಿ ಮಡಿದಿದ್ದರಿಂದ ಗಂಗದೊರೆ ಶ್ರೀವಿಕ್ರಮನು ಆತನ ಕುಟುಂಬ ನಿರ್ವಹಣೆಗೆ ಭೂದಾನ ನೀಡಿ ಆ ಶಾಸನವನ್ನು ಬರೆಯಿಸಿದ್ದಾನೆ. ಆದರೆ ಆ ಶಾಸನವನ್ನು ಮುಳುಕುಂಟೆಗೆ ಸಾಗಿಸಿ ಅಲ್ಲಿನ ಆಶ್ರಮದ ಪಕ್ಕದಲ್ಲಿ ನಿಲ್ಲಿಸಿದ್ದಾರೆ. ಹೊನ್ನುಡಿಕೆ ಬಳಿಯ ಜಲಗಾರ ದಿಬ್ಬದ ಬಳಿ 8ನೇ ಶತಮಾನದಲ್ಲಿ ಚಿಕ್ಕ ತೊರೆಯೊಂದು ಹರಿಯುತ್ತಿದ್ದು ಅದರ ಬಳಿ ವಿಶ್ವಕರ್ಮಿಗಳು ಆ ನೀರಿನಲ್ಲಿ ಬರುತ್ತಿದ್ದ ಮಣ್ಣನ್ನು ಪರಿಶೋಧಿಸಿ ಬಂಗಾರ ಸಂಗ್ರಹಿಸುತ್ತಿದ್ದರೆಂದು ಹೇಳಲಾಗುತ್ತದೆ. ಆದರೆ ಇಂದು ಆ ತೊರೆ ಪೂರ್ಣವಾಗಿ ನಾಶವಾಗಿದ್ದು, ಆ ಪ್ರದೇಶದಲ್ಲಿ ಜಮೀನುಗಳಾಗಿವೆ. ಆ ಜಾಗದಲ್ಲಿ ಇಂದಿಗೂ ದೇವಾಲಯದ ಅವಶೇಷಗಳಾದ ದೇವರ ಪಾಣಿಪೀಠ, ಇಟ್ಟಿಗೆ ಚೂರು ಮುಂತಾದ ಪ್ರಾಚೀನ ಪಳೆಯುಳಿಕೆಗಳನ್ನು ಸಂಗ್ರಹಿಸಿದ್ದಾರೆ.



ತುಮಕೂರು ತಾಲೂಕು ಹೊನ್ನುಡಿಕೆ ಸಮೀಪದ ಜಲಗಾರ ದಿಬ್ಬದಲ್ಲಿ ಮಣ್ಣಿನಲ್ಲಿ ಹೂತುಹೋಗಿದ್ದ ಕ್ರಿ.ಶ.740ರ ಕಾಲದ ಶಿಲಾಶಾಸನವನ್ನು ಸಿದ್ಧಗಂಗಾ ಮಹಿಳಾ ಕಾಲೇಜಿನ ಎನ್‌ಎಸ್‌ಎಸ್ ಶಿಬಿರಾರ್ಥಿಗಳು ಸಂರಕ್ಷಿಸಿ ಸ್ಥಾಪಿಸಿದರು.



ಪತ್ತೆಯಾದ ಕ್ರಿ.ಶ.740ರ ಕಾಲದ ಶಿಲಾಶಾಸನ.

ಈ ಸಂರಕ್ಷಿತ ಶಾಸನ ಕ್ರಿ.ಶ. 749ರ ಕಾಲಕ್ಕೆ ಸೇರಿದ್ದಾಗಿದ್ದು ತಲಕಾಡು ಗಂಗರ ದೊರೆ ಶ್ರೀಪುರುಷ ತನ್ನ ಚಿಕ್ಕಪ್ಪ ಶಿವಮಾರ ಎರೆಯಪ್ಪ ಹೊನ್ನುಡಿಕೆಯನ್ನು ಆಳ್ವಿಕೆ ಮಾಡುತ್ತಿದ್ದ ಎಂಬುದನ್ನು ಉಲ್ಲೇಖಿಸಿದೆ. ಮತ್ತೊಂದು ಶಾಸನದಲ್ಲಿ ಜಲಗಾರ ದಿಬ್ಬದ 8ನೇ ಶತಮಾನದಲ್ಲಿ ಹರಿಯುತ್ತಿದ ಚಿಕ್ಕ ತೊರೆಯ ನೀರಿನಲ್ಲಿ ವಿಶ್ವಕರ್ಮಿಗಳು ಮಣ್ಣನ್ನು ಪರಿಶೋಧಿಸಿ ಬಂಗಾರ ಸಂಗ್ರಹಿಸುತ್ತಿದ್ದರೆಂದು ಹೇಳಲಾಗಿದೆ.

| ಡಾ.ಡಿ.ಎನ್.ಯೋಗೀಶ್ವರಪ್ಪ
ಸಂಶೋಧಕ, ತುಮಕೂರು

### ಅರಿವಿನ ಜಾಗೃತಿ

ಹೊನ್ನುಡಿಕೆಯ ಅತ್ಯಂತ ಪ್ರಾಚೀನ ದೇವಾಲಯವಾದ ಚೊಕ್ಕಪೆರುಮಾಳ ದೇವಾಲಯದ ಸುತ್ತ ಬೆಳೆದಿದ್ದ ಮುಳ್ಳಿನ ಗಿಡ ಗಂಟಿಗಳನ್ನು ಕಿತ್ತುಹಾಕಿ, ಆ ದೇಗುಲದ ಆವರಣವನ್ನು ಸ್ವಚ್ಛಗೊಳಿಸಿ ಅಲ್ಲಿನ ಜನರಲ್ಲಿ ಸ್ಮಾರಕಗಳ ಸಂರಕ್ಷಣೆಯ ಅರಿವಿನ ಜಾಗೃತಿಯನ್ನು ಮೂಡಿಸಿದರು. ರಾಷ್ಟ್ರೀಯ ಸೇವಾ ಯೋಜನೆ ಶಿಬಿರಾಧಿಕಾರಿ ಡಾ.ನಳಿನಾ, ಹರ್ಷಶ್ರೀ, ಪ್ರಭುಸ್ವಾಮಿ, ಸ್ಮಾರಕಗಳ ಸಂರಕ್ಷಣೆಗೆ ಮಾರ್ಗದರ್ಶನ ನೀಡಿದ ಡಾ.ಡಿ.ಎನ್.ಯೋಗೀಶ್ವರಪ್ಪ, ಹೊನ್ನುಡಿಕೆಯ ಉದಯ್, ಜಲಗಾರ ದಿಬ್ಬ ಸ್ಥಳವಿರುವ ಜಮೀನಿನ ಮಾಲಿಕರಾದ ಜಗದೀಶ್ ಮೊದಲಾದವರಿದ್ದರು.

ಹೊನ್ನುಡಿಕೆ ಬಳಿ ಜಿಲ್ಲೆಯ ಮೊದಲ ಶಾಸನ ಪತ್ತೆ

# ಗಂಗರ ಕಾಲದ ಶಿಲಾಶಾಸನ ಪತ್ತೆ

ಪ್ರಜಾವಾಣಿ ವಾರ್ತೆ

ತುಮಕೂರು: ತಾಲ್ಲೂಕಿನ ಹೊನ್ನುಡಿಕೆ ಬಳಿ ಜಿಲ್ಲೆಯ ಮೊದಲನೆಯದು ಎನ್ನಲಾದ, ತಲಕಾಡು ಗಂಗರ ಕಾಲದ ಶಿಲಾಶಾಸನ ಪತ್ತೆಯಾಗಿದೆ. ಇದು ಕ್ರಿ.ಶ 749ರ ಕಾಲಕ್ಕೆ ಸೇರಿದ ಶಾಸನವಾಗಿದೆ.

ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಪದವಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿನಿಯರು ಹೊನ್ನುಡಿಕೆಯಿಂದ ಜಲಗಾರ ದಿಬ್ಬದವರೆಗೆ ಹೆರಿಟೇಜ್ ವಾಕ್ ಮೂಲಕ ಮೆರವಣಿಗೆಯಲ್ಲಿ ಸಾಗಿ ಮಣ್ಣಿನಲ್ಲಿ ಹೂತು ಹೋಗಿದ್ದ ಶಿಲಾಶಾಸನ ಮೇಲಕ್ಕೆತ್ತಿ, ಸ್ವಚ್ಛಗೊಳಿಸಿ ಅದೇ ಸ್ಥಳದಲ್ಲಿ ಪುನರ್‌ಸ್ಥಾಪಿಸಿದರು.



ತುಮಕೂರು ತಾಲ್ಲೂಕಿನ ಹೊನ್ನುಡಿಕೆ ಬಳಿ ಪತ್ತೆಯಾದ ಶಿಲಾಶಾಸನದ ಜತೆ ಇತಿಹಾಸಕಾರ ಡಿ.ಎನ್.ಯೋಗೀಶ್ವರಪ್ಪ, ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಪದವಿ ಕಾಲೇಜಿನ ಎನ್‌ಎಸ್‌ಎಸ್ ಅಧಿಕಾರಿಗಳಾದ ನಳಿನಾ, ಹರ್ಷಶ್ರೀ, ಪ್ರಭುಸ್ವಾಮಿ ಮತ್ತು ವಿದ್ಯಾರ್ಥಿಗಳು ಇದ್ದಾರೆ

'ತಲಕಾಡು ಗಂಗರ ದೊರೆ ಶ್ರೀಪುರುಷ ತನ್ನ ಚಿಕ್ಕಪ್ಪ ಶಿವಮಾರ ಎರೆಯಪ್ಪ ಎಂಬುವರು ಹೊನ್ನುಡಿಕೆಯನ್ನು ಆಳ್ವಿಕೆ ಮಾಡುತ್ತಿದ್ದರು. ದೊರೆ ಶ್ರೀಪುರುಷ ಮಹಾರಾಜ ಸುಗ್ಗಿಯ ಕಾಲದಲ್ಲಿ ಹೊನ್ನುಡಿಕೆಯಲ್ಲಿ ಸಂಗ್ರಹವಾಗುತ್ತಿದ್ದ ಬಂಗಾರದ ರೂಪದ ಸುಂಕವನ್ನು ಅಲ್ಲಿನ ದೇವಿ ಭಟಾರರಿಗೆ (ಹೊನ್ನಾದೇವಿ) ಜಮಾ ಮಾಡಬೇಕೆಂದು ಶಾಸನದಲ್ಲಿ ಆದೇಶಿಸಿದ್ದಾನೆ' ಎಂದು ಇತಿಹಾಸಕಾರ ಡಿ.ಎನ್.ಯೋಗೀಶ್ವರಪ್ಪ ತಿಳಿಸಿದ್ದಾರೆ.

ಶಾಸನವನ್ನು ಗ್ರಾನೈಟ್ ಶಿಲೆಯಲ್ಲಿ 4 ಅಡಿ ಅಗಲ, 2 ಅಡಿ ಎತ್ತರದಲ್ಲಿ ಎಂಟು ಸಾಲಿನಲ್ಲಿ ಬರೆಯಲಾಗಿದೆ. ಇದೇ ಜಾಗದಲ್ಲಿ ಇನ್ನೊಂದು ಶಾಸನವೂ ಇತ್ತು. ಅದು ಕೂಡಾ ತಲಕಾಡು ಗಂಗರ ಕಾಲಕ್ಕೆ ಸೇರಿತ್ತು. ಆ ಶಾಸನವೂ ಎಂಟು ಸಾಲುಗಳನ್ನು ಒಳಗೊಂಡಿತ್ತು. ಹೊನ್ನುಡಿಕೆಯ ಕಮರುಗ ಎಂಬ ವೀರ ಹೋರಾಟದಲ್ಲಿ ಮರಣ ಹೊಂದಿದ್ದರು. ಗಂಗದೊರೆ ಶ್ರೀವಿಕ್ರಮನು ಆತನ ಕುಟುಂಬ ನಿರ್ವಹಣೆಗೆ ಭೂದಾನ ನೀಡಿ ಆ ಶಾಸನ ಬರೆಯಿಸಿದ್ದಾನೆ. ಆ ಶಾಸನವನ್ನು ಮುಳುಕುಂಟೆಗೆ ಸಾಗಿಸಿ ಅಲ್ಲಿನ ಆಶ್ರಮದ ಪಕ್ಕದಲ್ಲಿ ನಿಲ್ಲಿಸಿದ್ದಾರೆ ಎಂದು ಮಾಹಿತಿ ನೀಡಿದರು.

ಎಂಟನೇ ಶತಮಾನದಲ್ಲಿ ಹೊನ್ನುಡಿಕೆ ಬಳಿಯ ಜಲಗಾರ ದಿಬ್ಬದ ಬಳಿ ಚಿಕ್ಕ ತೊರೆ ಹರಿಯುತ್ತಿತ್ತು. ವಿಶ್ವಕರ್ಮಿಗಳು ಅ ನೀರಿನಲ್ಲಿ ಬರುತ್ತಿದ್ದ ಮಣ್ಣನ್ನು ಪರಿಶೋಧಿಸಿ ಬಂಗಾರ ಸಂಗ್ರಹಿಸುತ್ತಿದ್ದರು ಎಂದು ಹೇಳಲಾಗುತ್ತಿದೆ. ಆದರೆ ಇಂದು ಆ ತೊರೆ ಪೂರ್ಣವಾಗಿ ನಾಶವಾಗಿದೆ' ಎಂದರು.

ಎನ್‌ಎಸ್‌ಎಸ್ ಅಧಿಕಾರಿಗಳಾದ ನಳಿನಾ, ಹರ್ಷಶ್ರೀ, ಪ್ರಭುಸ್ವಾಮಿ, ಹೊನ್ನುಡಿಕೆಯ ಉದಯ್, ಜಮೀನಿನ ಮಾಲೀಕ ಜಗದೀಶ್ ಹಾಜರಿದ್ದರು.

REDMI NOTE 8 PRO
AI QUAD CAMERA

# ಶಾಸನ ಸಂರಕ್ಷಿಸಿದ ಎನ್ ಎಸ್ ಎಸ್ ವಿದ್ಯಾರ್ಥಿನಿಯರು

■ ಪ್ರಜಾಪ್ರಗತಿ.ಕಾಂ

ತುಮಕೂರು : ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಪದವಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿನಿಯರು ತುಮಕೂರು ಬಳಿಯ ಹೊನ್ನುಡಿಕೆಯಿಂದ ಜಲಗಾರ ದಿಬ್ಬದವರೆಗೆ ಹೆರಿಟೇಜ್ ವಾಕ್ ಮೂಲಕ ಮೆರವಣಿಗೆಯಲ್ಲಿ ಸಾಗಿ ಮಣ್ಣನಲ್ಲಿ ಹೂತುಹೋಗಿದ್ದ ತುಮಕೂರು ಜಿಲ್ಲೆಯ ಮೊಟ್ಟಮೊದಲ ಶಿಲಾಶಾಸನವನ್ನು ಮೇಲಕ್ಕೆತ್ತಿ, ಸ್ವಚ್ಛಗೊಳಿಸಿ ಆದೇ ಸ್ಥಳದಲ್ಲಿ ಪುನರ್ ಸ್ಥಾಪಿಸಿದರು.

ಈ ಸಂದರ್ಭದಲ್ಲಿ ಮಾರ್ಗದರ್ಶನ ನೀಡಿದ ಇತಿಹಾಸ ಸಂಶೋಧಕರಾದ ಡಾ. ಡಿ.ಎನ್. ಯೋಗೀಶ್ವರಪ್ಪ ನವರು ಈ ಶಾಸನವು ಕ್ರಿ.ಶ. 749ರ ಕಾಲಕ್ಕೆ ಸೇರಿದ್ದು, ತಲಕಾಡು ಗಂಗರ ದೊರೆ ಶ್ರೀಪುರುಷ ತನ್ನ ಚಿಕ್ಕಪ್ಪ ಶಿವಮಾರ ಎರೆಯಪ್ಪ ಹೊನುಡಿಕೆಯನ್ನು ಆಳ್ವಿಕೆ ಮಾಡುತ್ತಿದ್ದನು. ದೊರೆ ಶ್ರೀಪುರುಷ ಮಹಾರಾಜ ಸುಗ್ಗಿಯ ಕಾಲದಲ್ಲಿ ಹೊನುಡಿಕೆಯಲ್ಲಿ ಸಂಗ್ರಹವಾಗುತ್ತಿದ್ದ ಬಂಗಾರದ ರೂಪದ ಸುಂಕವನ್ನು ಅಲ್ಲಿನ ದೇವಿ ಭಟಾರರಿಗೆ (ಹೊನ್ನಾದೇವಿ) ಜಮಾ ಮಾಡಬೇಕೆಂದು ಆದೇಶಿಸಿದ್ದಾನೆ ಎಂದು ತಿಳಿಸಿದರು.



ಈ ಶಾಸನವನ್ನು ಗ್ರಾನೈಟ್ ಶಿಲೆಯಲ್ಲಿ 4 ಅಡಿ ಅಗಲ 2 ಅಡಿ ಎತ್ತರದಲ್ಲಿ ಎಂಟು ಸಾಲಿನಲ್ಲಿ ಬರೆಯಲಾಗಿದೆ. ಇದೇ ಜಾಗದಲ್ಲಿ ಇನ್ನೊಂದು ಶಾಸನವೂ ಇತ್ತು. ಅದೂ ಕೂಡಾ ತಲಕಾಡು ಗಂಗರ ಕಾಲಕ್ಕೆ ಸೇರಿತ್ತು. ಆ ಶಾಸನವೂ ಎಂಟು ಸಾಲುಗಳನ್ನೊಳಗೊಂಡಿದ್ದು ಹೊನ್ನುಡಿಕೆಯ ಕಮರುಗ ಎಂಬ ವೀರ ಹೋರಾಟದಲ್ಲಿ ಸತ್ತುಹೋಗಿದ್ದುದರಿಂದ ಗಂಗದೊರೆ ಶ್ರೀವಿಕ್ರಮನು ಆತನ ಕುಟುಂಬ ನಿರ್ವಹಣೆಗೆ ಭೂದಾನ ನೀಡಿ ಆ ಶಾಸನವನ್ನು ಬರೆಯಿಸಿದ್ದಾನೆ. ಆದರೆ ಆ ಶಾಸನವನ್ನು ಮುಳುಕುಂಟೆಗೆ ಸಾಗಿಸಿ ಅಲ್ಲಿನ ಆಶ್ರಮದ ಪಕ್ಕದಲ್ಲಿ ನಿಲ್ಲಿಸಿದ್ದಾರೆ ಎಂಬ ಮಾಹಿತಿ ನೀಡಿದರು.

ಹೊನ್ನುಡಿಕೆ ಬಳಿಯ ಜಲಗಾರ ದಿಬ್ಬದ ಬಳಿ ಎಂಟನೇ ಶತಮಾನದಲ್ಲಿ ಚಿಕ್ಕ ತೊರೆಯೊಂದು ಹರಿಯುತ್ತಿದ್ದು ಅದರ ಬಳಿ ವಿಶ್ವಕರ್ಮಿಗಳು ಆ ನೀರಿನಲ್ಲಿ ಬರುತ್ತಿದ್ದ ಮಣ್ಣನ್ನು ಪರಿಶೋಧಿಸಿ ಬಂಗಾರವನ್ನು ಸಂಗ್ರಹಿಸುತ್ತಿದ್ದರೆಂದು ಹೇಳಲಾಗುತ್ತದೆ. ಆದರೆ ಇಂದು ಆ ತೊರೆ ಪೂರ್ಣವಾಗಿ ನಾಶವಾಗಿದ್ದು, ಆ ಪ್ರದೇಶದಲ್ಲಿ ಜಮೀನುಗಳಾಗಿವೆ. ಆ ಜಾಗದಲ್ಲಿ ಇಂದಿಗೂ ದೇವಾಲಯದ ಅವಶೇಷಗಳಾದ ದೇವರ ಪಾಣಿಪೀಠ, ಇಟ್ಟಿಗೆ ಚೂರು ಮುಂತಾದ ಪ್ರಾಚೀನ ಪಳೆಯುಳಿಕೆಗಳನ್ನು ವಿದ್ಯಾರ್ಥಿನಿಯರು ಸಂಗ್ರಹಿಸಿ ಅವುಗಳನ್ನು ಅಲ್ಲಿಯೇ ಒಂದೆಡೆ ಸಂಗ್ರಹಿಸಿ ಇಟ್ಟಿದ್ದಾರೆ.

ರಾಷ್ಟ್ರೀಯ ಸೇವಾ ಯೋಜನೆಯ ಅಧಿಕಾರಿಗಳಾದ ಡಾ. ನಳಿನ, ಹರ್ಷಶ್ರೀ, ಪ್ರಭುಸ್ವಾಮಿ, ಸ್ಮಾರಕಗಳ ಸಂರಕ್ಷಣೆಗೆ ಮಾರ್ಗದರ್ಶನ ನೀಡಿದ ಡಾ. ಡಿ.ಎನ್. ಯೋಗೀಶ್ವರಪ್ಪ, ಹೊನ್ನುಡಿಕೆಯ ಉದಯ್, ಜಲಗಾರ ದಿಬ್ಬ ಸ್ಥಳವಿರುವ ಜಮೀನಿನ ಮಾಲಿಕರಾದ ಜಗದೀಶ್ ಮೊದಲಾದವರಿದ್ದರು.

# ಜಿಲ್ಲೆಯ ಮೊದಲ ಶಾಸನ ಸಂರಕ್ಷಣೆ: ಎನ್‌ಎಸ್‌ಎಸ್ ವಿದ್ಯಾರ್ಥಿನಿಯರ ಶ್ರಮ



ತುಮಕೂರು: ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಪದವಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿನಿಯರು ತುಮಕೂರು ಬಳಿಯ ಹೊನ್ನುಡಿಕೆಯಿಂದ ಜಲಗಾರ ದಿಬ್ಬದವರೆಗೆ ಹೆರಿಟೇಜ್ ವಾಕ್ ಮೂಲಕ ಮೆರವಣಿಗೆಯಲ್ಲಿ ಸಾಗಿ ಮಣ್ಣಿನಲ್ಲಿ ಹೂತುಹೋಗಿದ್ದ ತುಮಕೂರು ಜಿಲ್ಲೆಯ ಮೊಟ್ಟಮೊದಲ ಶಿಲಾಶಾಸನವನ್ನು ಮೇಲಕ್ಕೆತ್ತಿ, ಸ್ವಚ್ಛಗೊಳಿಸಿ ಅದೇ ಸ್ಥಳದಲ್ಲಿ ಪುನರ್ ಸ್ಥಾಪಿಸಿದರು.

ವಿದ್ಯಾರ್ಥಿನಿಯರಿಗೆ ಮಾರ್ಗದರ್ಶನ ನೀಡಿದ ಇತಿಹಾಸ ಸಂಶೋಧಕ ಡಾ. ಡಿ.ಎನ್.ಯೋಗೀಶ್ವರಪ್ಪ, ಈ ಶಾಸನವು ಕ್ರಿ.ಶ. 749ರ ಕಾಲಕ್ಕೆ ಸೇರಿದ್ದು, ತಲಕಾಡು ಗಂಗರ ದೊರೆ ಶ್ರೀಪುರುಷ ತನ್ನ ಚಿಕ್ಕಪ್ಪ ಶಿವಮಾರ ಎರೆಯಪ್ಪ ಹೊನ್ನುಡಿಕೆಯನ್ನು ಆಳ್ವಿಕೆ ಮಾಡುತ್ತಿದ್ದನು. ದೊರೆ ಶ್ರೀಪುರುಷ ಮಹಾರಾಜ ಸುಗ್ಗಿಯ ಕಾಲದಲ್ಲಿ ಹೊನ್ನುಡಿಕೆಯಲ್ಲಿ ಸಂಗ್ರಹವಾಗುತ್ತಿದ್ದ ಬಂಗಾರದ ರೂಪದ ಸುಂಕವನ್ನು ಅಲ್ಲಿನ ದೇವಿ ಭಟಾರರಿಗೆ (ಹೊನ್ನಾದೇವಿ) ಜಮಾ ಮಾಡಬೇಕೆಂದು ಆದೇಶಿಸಿದ್ದಾನೆ ಎಂದು ತಿಳಿಸಿದರು.

ಈ ಶಾಸನವನ್ನು ಗ್ರಾನೈಟ್ ಶಿಲೆಯಲ್ಲಿ 4 ಅಡಿ ಅಗಲ 2 ಅಡಿ ಎತ್ತರದಲ್ಲಿ ಎಂಟು ಸಾಲಿನಲ್ಲಿ ಬರೆಯಲಾಗಿದೆ. ಇದೇ ಜಾಗದಲ್ಲಿ ಇನ್ನೊಂದು ಶಾಸನವೂ ಇತ್ತು. ಅದೂ ಕೂಡಾ ತಲಕಾಡು ಗಂಗರ ಕಾಲಕ್ಕೆ ಸೇರಿತ್ತು. ಆ ಶಾಸನವೂ ಎಂಟು ಸಾಲುಗಳನ್ನೊಳಗೊಂಡಿದ್ದು ಹೊನ್ನುಡಿಕೆಯ ಕಮರುಗ ಎಂಬ ವೀರ ಹೋರಾಟದಲ್ಲಿ ಸತ್ತುಹೋಗಿದ್ದುದರಿಂದ ಗಂಗದೊರೆ ಶ್ರೀವಿಕ್ರಮನು ಆತನ ಕುಟುಂಬ ನಿರ್ವಹಣೆಗೆ ಭೂದಾನ ನೀಡಿ ಆ ಶಾಸನವನ್ನು ಬರೆಯಿಸಿದ್ದಾನೆ. ಆದರೆ ಆ ಶಾಸನವನ್ನು ಮುಳುಕುಂಟೆಗೆ ಸಾಗಿಸಿ ಅಲ್ಲಿನ ಆಶ್ರಮದ ಪಕ್ಕದಲ್ಲಿ ನಿಲ್ಲಿಸಿದ್ದಾರೆ ಎಂಬ ಮಾಹಿತಿ ನೀಡಿದರು.

ಹೊನ್ನುಡಿಕೆ ಬಳಿಯ ಜಲಗಾರ ದಿಬ್ಬದ ಬಳಿ ಎಂಟನೇ ಶತಮಾನದಲ್ಲಿ ಚಿಕ್ಕ ತೊರೆಯೊಂದು ಹರಿಯುತ್ತಿದ್ದು ಅದರ ಬಳಿ ವಿಶ್ವಕರ್ಮಿಗಳು ಆ ನೀರಿನಲ್ಲಿ ಬರುತ್ತಿದ್ದ ಮಣ್ಣನ್ನು ಪರಿಶೋಧಿಸಿ ಬಂಗಾರವನ್ನು ಸಂಗ್ರಹಿಸುತ್ತಿದ್ದರೆಂದು ಹೇಳಲಾಗುತ್ತದೆ. ಆದರೆ



ಇಂದು ಆ ತೊರೆ ಪೂರ್ಣವಾಗಿ ನಾಶವಾಗಿದ್ದು, ಆ ಪ್ರದೇಶದಲ್ಲಿ ಜಮೀನುಗಳಾಗಿವೆ. ಆ ಜಾಗದಲ್ಲಿ ಇಂದಿಗೂ ದೇವಾಲಯದ ಅವಶೇಷಗಳಾದ ದೇವರ ಪಾಣಿಪೀಠ, ಇಟ್ಟಿಗೆ ಚೂರು ಮುಂತಾದ ಪ್ರಾಚೀನ ಪಳೆಯುಳಿಕೆಗಳನ್ನು ವಿದ್ಯಾರ್ಥಿನಿಯರು ಸಂಗ್ರಹಿಸಿ ಅವುಗಳನ್ನು ಅಲ್ಲಿಯೇ ಒಂದೆಡೆ ಸಂಗ್ರಹಿಸಿ ಇಟ್ಟಿದ್ದಾರೆ.

ಹೊನ್ನುಡಿಕೆಯ ಅತ್ಯಂತ ಪ್ರಾಚೀನ ದೇವಾಲಯವಾದ ಚೊಕ್ಕಪೆರುಮಾಳ ದೇವಾಲಯದ ಸುತ್ತ ಬೆಳೆದಿದ್ದ ಮುಳ್ಳಿನ ಗಿಡ ಗೆಂಟೆಗಳನ್ನು ಕಿತ್ತುಹಾಕಿ, ಆ ದೇಗುಲದ ಆವರಣವನ್ನು ಸ್ವಚ್ಛಗೊಳಿಸಿ ಅಲ್ಲಿನ ಜನರಲ್ಲಿ ಸ್ಮಾರಕಗಳ ಸಂರಕ್ಷಣೆಯ ಅರಿವಿನ ಜಾಗೃತಿಯನ್ನು ಮೂಡಿಸಿದರು. ರಾಷ್ಟ್ರೀಯ ಸೇವಾ ಯೋಜನೆಯ ಅಧಿಕಾರಿಗಳಾದ ಡಾ. ನಳಿನ, ಹರ್ಷಶ್ರೀ, ಪ್ರಭುಸ್ವಾಮಿ, ಸ್ಮಾರಕಗಳ ಸಂರಕ್ಷಣೆಗೆ ಮಾರ್ಗದರ್ಶನ ನೀಡಿದ ಡಾ. ಡಿ.ಎನ್.ಯೋಗೀಶ್ವರಪ್ಪ, ಹೊನ್ನುಡಿಕೆಯ ಉದಯ್, ಜಲಗಾರ ದಿಬ್ಬ ಸ್ಥಳವಿರುವ ಜಮೀನಿನ ಮಾಲೀಕ ಜಗದೀಶ್ ಇದ್ದರು.

## ಶಾಸನ ಸಂರಕ್ಷಿಸಿದ ಎನ್.ಎಸ್.ಎಸ್. ವಿದ್ಯಾರ್ಥಿನಿಯರು



ತುಮಕೂರು: ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಪದವಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿನಿಯರು ತುಮಕೂರು ಬಳಿಯ ಹೊನ್ನುಡಿಕೆಯಿಂದ ಜಲಗಾರ ದಿಬ್ಬದವರೆಗೆ ಹೆರಿಟೇಜ್ ವಾಕ್ ಮೂಲಕ ಮೆರವಣಿಗೆ ಯಲ್ಲಿ ಸಾಗಿ ಮಣ್ಣಿನಲ್ಲಿ ಹೂತುಹೋಗಿದ್ದ ತುಮಕೂರು ಜಿಲ್ಲೆಯ ಮೊಟ್ಟಮೊದಲ ಶಿಲಾಶಾಸನವನ್ನು ಮೇಲಕ್ಕೆತ್ತಿ, ಸ್ವಚ್ಛಗೊಳಿಸಿ ಅದೇ ಸ್ಥಳದಲ್ಲಿ ಪುನರ್ ಸ್ಥಾಪಿಸಿದರು.

ಈ ಸಂದರ್ಭದಲ್ಲಿ ಮಾರ್ಗದರ್ಶನ ನೀಡಿದ ಇತಿಹಾಸ ಸಂಶೋಧಕರಾದ ಡಾ. ಡಿ.ಎನ್.ಯೋಗೀಶ್ವರಪ್ಪ ನವರು ಈ ಶಾಸನವು ಕ್ರಿ.ಶ. 749ರ ಕಾಲಕ್ಕೆ ಸೇರಿದ್ದು, ತಲಕಾಡು ಗಂಗರ ದೊರೆ ಶ್ರೀಪುರುಷ ತನ್ನ ಚಿಕ್ಕಪ್ಪ ಶಿವಮಾರ ಎರೆಯಪ್ಪ ಹೊನ್ನುಡಿಕೆಯನ್ನು ಆಳ್ವಿಕೆ ಮಾಡುತ್ತಿದ್ದನು. ದೊರೆ ಶ್ರೀಪುರುಷ ಮಹಾರಾಜ ಸುಗ್ಗಿಯ ಕಾಲದಲ್ಲಿ ಹೊನ್ನುಡಿಕೆಯಲ್ಲಿ ಸಂಗ್ರಹವಾಗುತ್ತಿದ್ದ ಬಂಗಾರದ ರೂಪದ ಸುಂಕವನ್ನು ಅಲ್ಲಿನ ದೇವಿ ಭಟಾರರಿಗೆ (ಹೊನ್ನಾದೇವಿ) ಜಮಾ ಮಾಡಬೇಕೆಂದು ಆದೇಶಿಸಿದ್ದಾನೆ ಎಂದು ತಿಳಿಸಿದರು.

ಈ ಶಾಸನವನ್ನು (2ನೇ ಪುಟಕ್ಕೆ)